ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೯ನೇ ಮಾರ್ಚಿ ೧೯೮೭ ಫಾಲ್ಗುಣ ೧೮, ಶಕ ೧೯೦೮

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರುಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ರಾಜ್ಯದಲ್ಲಿ ಕೃಷಿ ಬೆಳೆಗಳ ಉತ್ಪಾದನೆ

೮೨೫. ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಒಕ್ಕಲುತನ ಪ್ರಮುಖ ಹುಟ್ಟುವಳಿಗಳಾದ ಜೋಳ, ಶೇಂಗಾ, ಹತ್ತಿ, ಮೆಣಸಿನ ಕಾಯಿ, ಗೋಧಿ, ಗೋವಿನ ಜೋಳ, ಬೆಲ್ಲ ಹಾಗೂ ತಂಬಾಕು ಇವುಗಳ ಉತ್ಪಾದನೆಯ ಹೆಕ್ಟೇರ್ ಕ್ಷೇತ್ರ ಎಷ್ಟು ಉತ್ಪಾದನೆಯ ಪ್ರಮಾಣ (ಕ್ವಿಂಟಾಲ್) ಹಾಗೂ ೧೯೬೦, ೧೯೭೦, ೧೯೮೦ ಹಾಗೂ ೧೯೮೫-೮೬ ರಲ್ಲಿಯ ಒಟ್ಟು ಉತ್ಪಾದನೆ ತಿಳಿಸುವಿರಾ,

ಆ) ಈ ಮೇಲಿನ ಪ್ರಮುಖ ಒಕ್ಕಲುತನ ಹುಟ್ಟುವಳಿಯಂ ನೀರಾವರಿಯ ಹಾಗೂ ಒಣ ಪ್ರದೇಶದ (ಮಳೆಯಾಶ್ರಯ) ಭೂ ಪ್ರಮಾಣವೆಷ್ಟು,

ಇ) ರಾಜ್ಯದಲ್ಲಿ ಈ ಮೇಲಿನ ಹುಟ್ಟುವಳಿ ಹೆಚ್ಚಾಗುವಂತೆ ಸರ್ಕಾರ ಯಾವ ಯೋಜನೆ ಹಾಕಿ ಕೊಂಡಿರುವರು,

ಶ್ರೀ ಬಸವರಾಜ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ತಃಖ್ತೆ ೧ ರಲ್ಲಿ ವಿವರಗಳನ್ನು ಕೊಟ್ಟಿದೆ.

ಆ) ತಃಖ್ತೆ ೨ ರಲ್ಲಿ ವಿವರಗಳನ್ನು ಕೊಟ್ಟಿದೆ.

ಇ) ರಾಜ್ಯದಲ್ಲಿ ಧಾನ್ಯ ಬೆಳೆಗಳ ಹುಟ್ಟುವಳಿ ಹೆಚ್ಚಾಗುವಂತೆ ಅಧಿಕ ಇಳುವರಿ ತಳಿಗಳ ಯೋಜನೆ, ಅಧಿಕ ಆಹಾರೋತ್ಪಾದನಾ ಯೋಜನೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಸಾಮಗ್ರಿ ಚೀಲಗಳ ವಿತರಣೆ ಯೋಜನೆ ಮತ್ತು ವಿವಿಧ ಬೆಳೆಯ ತಳಿಗಳ ಕಿರುಪುತ್ತಿ ಯೋಜನೆಗಳನ್ನೂ, ಎಣ್ಣೆ ಕಾಳು ಬೆಳೆಗಳ ಹುಟ್ಟುವಳಿ ಹೆಚ್ಚಾಗುವಂತೆ, ರಾಷ್ಟ್ರೀಯ ಎಣ್ಣೆ ಕಾಳು ಅಭಿವೃದ್ಧಿ ಯೋಜನೆ ಹಾಗೂ ಹತ್ತಿ ಬೆಳೆಯ ಹುಟ್ಟುವಳಿ ಹೆಚ್ಚಿಸಲು ಹತ್ತಿ ಅಭಿವೃದ್ಧಿ ಯೋಜನೆಗಳನ್ನು ಜಾರಿ ಗೊಳಿಸಲಾಗಿದೆ. ತಂಬಾಕು ಹಾಗೂ ಮೆಣಸಿನಕಾಯಿ ಬೆಳೆ ಅಭಿವೃದ್ಧಿಗೆ ಯಾವುದೇ ನಿರ್ದಿಷ್ಟ ಯೋಜನೆ ಇರುವುದಿಲ್ಲ. ಆದರೂ ಈ ಬೆಳೆಗಳ ಬಗ್ಗೆ ತಾಂತ್ರಿಕ ಸಲಹೆಯನ್ನು ರೈತರಿಗೆ ನೀಡಲಾಗುತ್ತಿದೆ ಹಾಗೂ ಈ ಮೇಲಿನ ಎಲ್ಲಾ ಬೆಳೆಗಳ ಹುಟ್ಟುವಳಿ ಹೆಚ್ಚಿಸಲು ವಿವಿಧ ಹವಾಮಾನ ಕ್ಷೇತ್ರಗಳಲ್ಲಿ ಸಂಶೋಧನೆಯು ಆಗುತ್ತಿದ್ದು, ಕೃಷಿ ವಿಶ್ವವಿದ್ಯಾನಿಲಯಗಳು ಕೊಡುವ ಶಿಫಾರಸ್ಸುಗಳನ್ನೂ ವಿಶ್ವ ಬ್ಯಾಂಕ್ ನೆರವಿನಿಂದ ತೆಗೆದು ಕೊಂಡಿರುವ ಆಧುನಿಕ ಕೃಷಿ ವಿಸ್ತರಣಾ ಯೋಜನೆಯ ಮೂಲಕ ರೈತರಿಗೆ ತಲುಪಿಸಲಾಗುತ್ತಿದೆ. ತನ್ಮೂಲಕ ಹುಟ್ಟುವಳಿಯನ್ನು ಹೆಚ್ಚಿಸಲಾಗುತ್ತಿದೆ.

(ಅ) ತಃಪ್ತಿ--

೧೯೬೦-೬೧, ೧೯೭೦-೭೧, ೧೯೮೦-೮೧ ಮತ್ತು ೧೯೮೫-೮೬ ನೇ ಸಾಲುಗಳಲ್ಲಿ ರಾಜ್ಯದ ಗೋವಿನ ಜೋಳ, ಕಬ್ಬು ಹಾಗೂ ತಂಬಾಕು ಬೆಳೆಗಳ ವಿಸ್ತೀರ್ಣ ಉತ್ಪಾದನೆ ಮತ್ತು ಹೆಕ್ಟೇರುವಾರು

ಬೆಳೆಗಳು	ವಿಸ್ತೀರ್ಣ ಲಕ್ಷ ಹೆಕ್ಟೇರುಗಳಲ್ಲಿ				ಉತ್ಪಾದನೆ ಲಕ್ಷ	
	೧೯೬೦-೬೧	೧೯೭೦-೭೧	೧೯೮೦-೮೧	೧೯೮೫-೮೬ (ಹಂಗಾಮು)	೧೯೬೦-೬೧	೧೯೭೦-೭೧
೧	೨	೩	೪	೫	೬	೭
ಜೋಳ	೨೯.೬೯	೨೨.೨೪	೧೯.೯೦	೨೦.೪೨	೧೧.೫೪	೧೫.೬೫
ಶೇಂಗಾ	೯.೧೫	೧೦.೨೭	೭.೯೦	೮.೫೬	೪.೪೮	೭.೮೦
ಹತ್ತಿ	೯.೮೪	೧೧.೪೨	೧೦.೧೨	೭.೪೭	೩.೮೨*	೫.೭೦*
ಮೆಣಸಿನಕಾಯಿ	೧.೦೯	೧.೧೧	೧.೫೪	೧.೩೫	೦.೨೯	೦.೩೪
ಗೋಧಿ	೩.೨೪	೩.೪೩	೩.೨೨	೨.೭೩	೦.೭೭	೧.೩೦
ಗೋವಿನ ಜೋಳ	೦.೧೧	೦.೬೩	೧.೫೭	೧.೬೪	೦.೧೨	೨.೧೭
ಕಬ್ಬು	೦.೭೨	೧.೦೪	೧.೫೪	೧.೬೦	೫೧.೦೪	೮೧.೦೬
ತಂಬಾಕು	೧.೫೯	೦.೫೮	೦.೫೨	೦.೪೭	೦.೨೩	೦.೧೮

ಗಿ

—

ಒಕ್ಕಲುತನದ ಪ್ರಮುಖ ಹುಟ್ಟುವಳಿಗಳಾದ ಜೋಳ, ಶೇಂಗಾ, ಹತ್ತಿ, ಮೆಣಸಿನಕಾಯಿ, ಗೋಧಿ, ಇಳುವರಿ ದರ ಈ ಕೆಳಕಂಡಂತಿದೆ.

ಹೆಕ್ಟೇರುಗಳಲ್ಲಿ		ಸರಾಸರಿ ಇಳುವರಿ ಪ್ರತಿ ಹೆಕ್ಟೇರಿಗೆ ಕೆ. ಜಿ. ಗಳಲ್ಲಿ				
೧೯೮೦–೮೧	೧೯೮೫–೮೬ (ಹಂಗಾಮು)	೧೯೭೦–೭೧	೧೯೭೫–೭೬	೧೯೮೦–೮೧	೧೯೮೫–೮೬ (ಹಂಗಾಮು)	ಷರಾ
೮	೯	೧೦	೧೧	೧೨	೧೩	೧೪
೧೫೦.೦೬	೧೩.೩೨	೪೧೧	೭೪೦	೭೯೭	೬೮೭	
೪.೭೫	೬.೧೫	೫೧೮	೭೯೯	೬೩೨	೭೫೭	
೫.೯೭*	೫.೦೩*	೬೯	೯೫	೧೦೬	೧೨೦	ಉತ್ಪಾದನೆ ಲಕ್ಷ ಟೇಲ್‌ಗಳಲ್ಲಿ
೦.೪೮	೦.೪೧	೨೬೭	೩೦೯	೩೧೫	೩೦೧	
೧.೭೪	೧.೬೩	೨೫೨	೩೯೯	೫೬೯	೪೭೪	
೩.೮೧	೪.೦೬	೧೦೭೯	೭೪೯೪	೨೫೫೬	೨೬೧೪	
೧೭೧.೨೭	೧೪೫.೭೪	೭೫೫.೫	೮೧	೮೩	೮೩	ಇಳುವರಿ ಟನ್ನುಗಳಲ್ಲಿ
೦.೩೪	೦.೩೧	೬೦೧	೪೬೩	೬೮೯	೬೮೬	

(ಆ) ತಃಪ್ತೆ—

೧೯೬೦-೬೧, ೧೯೭೦-೭೧ ಮತ್ತು ೧೯೮೦-೮೧ ನೇ ಸಾಲಿಗೆ ಮೇಲಿನ ಪ್ರಮುಖ ಒಕ್ಕಲುತನ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಬೆಳೆಯ ಹೆಸರು	ನೀರಾವರಿಯಾದ ಕ್ಷೇತ್ರ ಲಕ್ಷ ಹೆಕ್ಟೇರುಗಳಲ್ಲಿ		
		೧೯೬೦-೬೧	೧೯೭೦-೭೧	೧೯೮೦-೮೧
೧	೨	೩	೪	೫
೧.	ಜೋಳ	೦.೩೯	೧ ೧೮	೧.೯೩
೨.	ಶೇಂಗಾ	—	೦.೯೧	೧.೦೨
೩.	ಹತ್ತಿ	೦.೧೬	೦.೬೦	೦.೬೭
೪.	ಮೆಣಸಿನ ಕಾಯಿ	—	೦.೩೪	೦.೨೫
೫.	ಗೋಧಿ	೦.೧೧	೦.೩೩	೦.೬೦
೬.	ಗೋವಿನ ಜೋಳ	೦.೧೦	೦.೫೭	೧.೨೯
೭.	ಕಬ್ಬು	೨.೬೮	೧.೦೨	೧.೫೪
೮.	ತಂಬಾಕು	—	೦.೦೨	೦.೦೨

೨

—

ಹೂಚ್ಚಿವಳಿಯಂ ನೀರಾವರಿಯಂ ಹಾಗೂ ಒಣ ಪ್ರದೇಶದ (ಮಳೆಯಂ ಆಶ್ರಯಂ) ಭೂ ಪ್ರಮಾಣ

ಹೊಳೆ ಆಶ್ರಯಿತಕ್ಷೇತ್ರ ಲಕ್ಷ ಹೆಕ್ಟೇರುಗಳಲ್ಲಿ				ಪರಾ
೧೯೬೦–೬೧	೧೯೭೦–೭೧	೧೯೮೦-೮೧		
೬	೭	೮		೯
೨೯.೩೦	೨೧.೦೬	೧೮.೯೭	೧)	೧೯೮೫–೮೬ನೇ ಸಾಲಿನ ಪ್ರಮುಖ
—	೯.೩೬	೬.೮೬		ಬೆಳೆಗಳ ನೀರಾವರಿಯಾದ ಹಾಗೂ
೯.೬೮	೧೦.೮೨	೯.೪೫		ಮಂಳೆ ಆಶ್ರಿತ ಪ್ರದೇಶದ ಮಾಹಿತಿ
—	೦.೭೭	೧.೨೯		ಯನ್ನು ಕಲೆ ಹಾಕಲಾಗಂತ್ತಿದೆ.
೩.೧೩	೩.೧೦	೨.೬೨	೨)	೧೯೬೦–೬೧ ನೇ ಸಾಲಿಗೆ ಶೇಂಗಾ,
೦.೧೧	೦.೦೬	೦.೨೮		ಮೆಣಸಿನ ಕಾಯಿಂ ಹಾಗೂ
೦.೦೪	೦.೦೨	—		ತಂಬಾಕು ಬೆಳೆಗಳ ನೀರಾವರಿ
—	೦.೩೬	೦.೫೦		ವಂತ್ರೂಒಣ ಪ್ರದೇಶದ(ಮಳೆಯಂ ಆಶ್ರಯಂ) ಭೂ ವಿಸ್ತೀರ್ಣವು ಪ್ರತ್ಯೇಕವಾಗಿ ದೊರೆಯಂವುದಿಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಈಗ ಈ ಹುಟ್ಟುವಳಿ ಹೆಚ್ಚಾಗಲಂ ಕೃಷಿ ಇಲಾಖೆಯು ವಿಭಾಗಗಳನ್ನೇನಾದರೂ ಗುರುತುಪಡಿಸಿದೆಯೆ ? ಹೇಗೆ ? ಕೆಲವು ಬೆಳೆಗಳು ಚೆನ್ನಾಗಿ ಬರುವಂಥ ಪ್ರದೇಶವನ್ನು ಗುರುತಿಸಿ ಅಲ್ಲಿ ಹೆಚ್ಚಿನ ಉತ್ಪಾದನೆಯನ್ನು ತೆಗೆದುಕೊಳ್ಳಲಿಕ್ಕೆ ಏನಾದರೂ ತಾವು ಕಾರ್ಯಕ್ರಮವನ್ನು ಮುಂದುಪರಿಸಿದ್ದಾರಾ ? ರೈತರ ಉತ್ಪಾದನೆಯನ್ನು ಹೆಚ್ಚಿಸಲು ಏನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದು ಮುಖ್ಯವಾಗಿ ಬೇಕಾಗಿರತಕ್ಕಂಥದ್ದು. ಇದರ ಬಗ್ಗೆ ಏನಂ ಹೇಳುತ್ತೀರಿ ?

ಶ್ರೀ ಬಸವರಾಜ್‌ಪಾಟೀಲ್ ಅನ್ನರಿ.—ಮಾನ್ಯ ಅಧ್ಯಕ್ಷರೇ, ಶಾಸಕರು ಕೇಳುವಂಥ ಪ್ರಶ್ನೆಯಲ್ಲಿ ಈಗಾಗಲೇ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅನೇಕ ಹೆಸರುಗಳ ತಳಿಗಳನ್ನು, ಬೀಜಗಳನ್ನು ರೈತರಿಗೆ ಕೊಡ ಬೇಕೆಂದು ಮತ್ತು ಅವರಿಗೆ ತರಬೇತಿಯನ್ನು ಕೊಡುವ ಬಗ್ಗೆ ಸಲಹೆಗಳನ್ನು ಕೊಡುತ್ತಿದ್ದೇವೆ. ಅವರ ತರಬೇತಿಯನ್ನು ನೋಡಿ ಆ ಭಾಗದಲ್ಲಿ ರೈತರಿಗೆ ಸಲಹೆಗಳನ್ನು ಕೊಡುತ್ತಿದ್ದೇವೆ. ಕಿರು ಚೀಲಗಳ ಮುಖಾಂತರವಾಗಿ ಹೊಸ ತಳಿಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಮಧ್ಯಮ ರೈತರಿಗೆ ಕೊಡ ಬೇಕೆಂಬ ವ್ಯವಸ್ಥೆಯನ್ನು ಮಾಡಿದೆ. ಆದರ ಪ್ರಕಾರವಾಗಿ ಮಾಡುತ್ತಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ರೈತರು ಅನೇಕ ಸಲ ಲಾಭದಾಯಕವಾಗುವಂಥ ಒಳ್ಳೆಯ ಬೆಲೆ ಬರತಕ್ಕಂಥದ್ದು ಕಂಡು ಬಂದರೆ ತಕ್ಷಣ ಅದೇ ಬೆಳೆಯನ್ನು ಎಲ್ಲಾ ಕಡೆಯಲ್ಲೂ ಬೆಳೆಯಲಿಕ್ಕೆ ಪ್ರಾರಂಭಮಾಡುತ್ತಾರೆ. ಕೆಲವೊಂದು ಪ್ರದೇಶದಲ್ಲಿ ಇಂಥ ಬೆಳೆಗಳು ಹೆಚ್ಚು ಇಳುವರಿ ಕೊಡಕತ್ತವೆ. ಆದ್ದರಿಂದ ಇದನ್ನು ನಿಗಧಿಪಡಿಸಿ ರೈತನಿಗೆ ಹೆಚ್ಚು ಲಾಭದಾಯಕವಾಗುವಂತೆ ಬೆಳೆಯನ್ನು ತೆಗೆಯಲಿಕ್ಕೆ ಅವನಿಗೆ ಹೆಚ್ಚು ಅನುಕೂಲವಾಗುವಂತೆ ತರಬೇತಿಯನ್ನು ಕೊಡುವುದರ ಬಗ್ಗೆ ಕೃಷಿ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾನಿಲಯದವರು ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ನರಿ.—ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ಹವಾಮಾನಕ್ಕೆ ಅನು ಗುಣವಾಗಿ ಆ ಭಾಗದಲ್ಲಿ ನಾವು ರೈತರಿಗೆ ಚೆನ್ನಾಗಿ ಬೆಳೆಯಲಿಕ್ಕೆ, ಅನುಕೂಲವಾಗುವಂಥ ಬೀಜಗಳನ್ನು ಮತ್ತು ಆ ಬಗ್ಗೆ ಉತ್ತೇಜನವನ್ನು ಮಾಡಬೇಕೆಂಬ ಪರಿಸ್ಥಿತಿಯಲ್ಲಿ ನಮ್ಮ ಹತ್ತಿರ ಅಂಕಿಸಂಖ್ಯೆಗಳು ಇದೆ ಮಾನ್ಯ ಸದಸ್ಯರು ಕೂಡಾ ಈ ಬಗ್ಗೆ ಒಂದೆರಡು ಮಾತನ್ನು ಹೇಳಿದರು. ಕಿರುಚೀಲಗಳ ಪ್ರಕಾರ ನಾವು ಹೊಸ ಹೊಸ ತಳಿಗಳನ್ನು ಮತ್ತು ಬೀಜಗಳನ್ನು ರೈತರಿಗೆ ಕೊಡುವ ಬಗ್ಗೆ ಮತ್ತು ಮುಂಗಾರಿನಲ್ಲಿ ಹೊಸ ಬೀಜಗಳನ್ನು ಕೊಟ್ಟು ಸಾಧನೆ ಮಾಡತಕ್ಕಂಥ ಗುರಿಯನ್ನು ಹವ್ಮಿಕೊಂಡಿದ್ದೇವೆ. ರೈತರಿಗೆ ಅನೇಕ ಸ್ಥಳಗಳನ್ನೂ ಕೂಡ ಗುರುತುಮಾಡಿದ್ದೇವೆ.

ಅಧ್ಯಕ್ಷರು.—ಪ್ರಶ್ನೆ ಸಂ ೫೧೧ (೯೮೬) : ಶ್ರೀ ಸಿ. ಕಣ್ಣನ್‌ರವರು ಗೈರುಹಾಜರಿ,

ಸುಳ್ಯ ತಾಲ್ಲೂಕಿನ ಬೆಳ್ಳಾರೆಗೆ ಪ್ರಥಮ ದರ್ಜೆ ಕಾಲೇಜಿನ ಮಂಜೂರಾತಿ

೯೬೩. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ಜಿಲ್ಲೆಗೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಂ ನೀಡಲಾಗುವುದು ಎಂದು ಸರ್ಕಾರ ದವರು ತೀರ್ಮಾನಿಸಿರುವುದು ನಿಜವೇ, ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಳ ತಾಲ್ಲೂಕಿನ ಬೆಳ್ಳಾರೆ ಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಬಿಸಲಂ ಪ್ರಸ್ತಾವನೆ ಇದ್ದಿತ್ತೆ ?

ಆ) ಹಾಗಿದ್ದಲ್ಲಿ ಬೆಳ್ಳಾರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಸಕ್ತ ಸಾಲಿನಲ್ಲಿಯೇ ಮಂಜೂರು ಮಾಡಿ ಪ್ರಾರಂಬಿಸಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಹಂತಹಂತವಾಗಿ ತಾಲ್ಲೂಕುಗಳಿಗೆ ಪ್ರಥಮ ದರ್ಜೆ ಕಾಲೇಜಗಳನ್ನು ಮಂಜೂರು ಮಾಡುವುದೇ ಸರ್ಕಾರವ ಉದ್ದೇಶ. ಬೆಳ್ಳಾರೆಯಲ್ಲಿ ಪ್ರಥಮ ದರ್ಜೆಕಾಲೇಜಂ ಪ್ರಾರಂಭಿಸುವ ಬಗ್ಗೆ ಮನವಿ ಬಂದಿತ್ತು.

ಸಂಪನ್ಮೂಲ ಮಿತಿಯಿಂದಾಗಿ ೧೯೮೬-೮೭ ೧೯೮೭-೮೮ರ ಸಾಲಿನಲ್ಲಿ ಯಾವುದೇ ಪ್ರಥಮ ದರ್ಜೆ ಕಾಲೇಜಂಗಳಿಗೆ ಮಂಜೂರಾತಿ ನೀಡಬಾರದೆಂದು ಸರ್ಕಾರ ತೀರ್ಮಾನಿಸಿದೆ.